**MVC 183/2022**
**PW 1**

ದಿನಾಂಕ:26.02.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾದ ಪ್ರಮಾಣವಚನ ಭೋಧಿಸಲಾಯಿತು.

<u>ಪಾಟೀ ಸವಾಲುಃ **2**ನೇ ಎದುರುದಾರರ ಪರ ಶ್ರೀ ಜೆ ಎಸ್ ವಕೀಲರಿಂದಃ</u>

ಅಪಘಾತವು **22.10.2021** ರಲ್ಲಿ ಆಗಿರುತ್ತದೆ. ತೋಟದಿಂದ ನಡೆದುಕೊಂಡು ಹೋಗುವಾಗ ಅಪಘಾತ ಆಗಿರುತ್ತದೆ. ಅಪಘಾತವು ಸೋಗಾಲದ ರಸ್ತೆ. ರಸ್ತೆ ಅಂದಾಜು **8** ಅಡಿ ಇತ್ತು. ನನ್ನಟಿ ವಿ ಎಸ್ ಸ್ಕೂಟಿ ಅಪಘಾತ ಪಡಿಸಿರುತ್ತದೆ. ಅದರಲ್ಲಿ ಒಬ್ಬರು ಇದ್ದರು, ಗಾಡಿ ಬರುವುದನ್ನು ನಾನು ನೋಡಿರುವುದಿಲ್ಲ. ಹಿಂದೆ ಇಂದ ಬಂದು ಅಪಘಾತ ಪಡಿಸಿರುತ್ತಾರೆ. ದೇವಸ್ಥಾನದ ಹತ್ತಿರ ರಾಘವೇಂದ್ರ ಮತ್ತು ಬಾಲುಗೋಪನ ಹೇಳಿರುತ್ತಾರೆ. ಆಸ್ಪತ್ರೆಗೆ ನನ್ನ ತಂದೆಯವರು ಕರೆದುಕೊಂಡು ಹೋಗಿದ್ದು ಅವರೇ ದೂರು ನೀಡಿರುತ್ತಾರೆ. ಅಪಘಾತವನುನ ನನ್ನ ತಂದೆ ಕಣ್ಣಾರೆ ನೋಡಿರುವುದಿಲ್ಲ. ಯಾವುದೊ ಬೇರೆ ವಾಹನ ಅಪಘಾತ ಪಡಿಸಿದ್ದು ವಿಮೆ ಇಲ್ಲ ಎಂದು ಹೇಳಿ **4** ದಿನ ತಡವಾಗಿ ದೂರು ಕೊಟ್ಟಿದ್ದೇವೆ ಎಂದರೆ ಸರಿಯಲ್ಲ. ನನ್ನನ್ನು ಬಿ ಜೆ ಲಿಂಗೇಗೌಡ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಶಸ್ತ್ರ ಚಿಕಿತ್ಸೆ ಮಾಡಿಸಿ ನಂತರ ನಾರಾಯಣ ಆಸ್ಪತ್ರೆಗೆ ಕರೆದುಕೊಂಡು ಹೋಗಿರುತ್ತಾರೆ.

**2. 2** ಆಸ್ಪತ್ರೆಯಲ್ಲಿ ಒಂದೇ ಕಾಲಿಗೆ ಶಸ್ತ್ರ ಚಿಕಿತ್ಸೆ ಮಾಡಿರುತ್ತಾರೆ. ಅಲ್ಲಿಯ ವವೈದ್ಯರನುನ ಕರೆದುಕೊಂಡು ಬಂದು ಸಾಕ್ಷಿ ಹೇಳಿಸಲು ತೊಂದರೆ ರಲ್ಲ. **3** ಲಕ್ಷ ಖರ್ಚಾಗಿದೆ ಎಂದು ದಾಖಲೆ ಹಾಜರುಪಡಿಸಿಲ್ಲ ಎಂದರೇ ಸರಿಯಲ್ಲ. ಅಪಘಾತವಾದಾಗ **42** ವರ್ಷ ಎಂದು ತೋರಿಸಲು ದಾಖಲೆ ಹಾಜರುಪಡಿಸಿದ್ದೇನೆ. ವೈದ್ಯಕೀಯ ಬಿಲ್ಲುಗಳನ್ನು ಸೃಷ್ಟಿ ಮಾಡಿಕೊಂಡಿದ್ದೇನೆ ಎಂದರೇ ಸರಿಯಲ್ಲ. ನಾರಾಯಣ ಆಸ್ಪತ್ರೆ ಮತ್ತು ಬಿ ಜೆ ಲಿಂಗೇ ಗೌಡ ಆಸ್ಪತ್ರೆಯಲ್ಲಿ ಹಣ ಪಾವತಿ ಮಾಡುವುದಕ್ಕೆ ರಶೀದಿಗಳನ್ನು ಹಾಜರುಪಡಿಸಿದ್ದೇನೆ. ಯಾವುದೇ ಹಣ ಪಾವತಿ ಮಾಡಿದೆ ಇದ್ದರು ಬಿಲ್ಲುಗಳನ್ನು ಪಡೆದುಕೊಂಡು ಬಂದು ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ನಾನು

ಅಪಘಾತವಾದಾಗ ವ್ಯವಸಾಯ ಮಾಡುತ್ತಿದ್ದೆ. ಜಮೀನು ನನ್ನ ತಂದೆ ಹೆಸರಿನಲ್ಲಿದೆ. ಈಗ ವ್ಯವಸಾಯ ಮಾಡುತ್ತಿಲ್ಲ. ನಾನು ತಿಂಗಳಿಗೆ **20** ಸಾವಿರ ಮಾಡುತ್ತಿದ್ದೆ ಎಂಬುದಕ್ಕೆ ದಾಖಲೆ ಹಾಜರುಪಡಿಸಿಲ್ಲ ಆದರೆ ಡೈರಿಗೆ ಹಾಲು ಹಾಕುತ್ತಿದ್ದೆ. ಡೈರಿ ಕಾರ್ಡ್ ನ್ನು ಹಾಜರುಪಡಿಸಲು ತೊಂದರೇ ಇದೆಯ ಎಂದರೇ ಇಲ್ಲ. ಓಡಾಡಲು ತೊಂದರೆ ಇದೇ ಎಂಬುದಕ್ಕೆ ವೈದ್ಯರು ದಾಖಲೆ ಕೊಟ್ಟಿರುವುದಿಲ್ಲ. ನಾನು ಆರಾಮವಾಗಿ ಓಡಾಡಿಕೊಂಡು ಚೆನ್ನಾಗಿ ಇದ್ದೆನೆ ಎಂದರೇ ಸರಿಯಲ್ಲ. ನನಗೆ ಆರ್ಥಿಕ ನಷ್ಟ ಆಗಿಲ್ಲ ಎಂದರೇ ಸರಿಯಲ್ಲ. ಪರಿಹಾರ ಪಡೆಯಲು ಸುಳ್ಳು ಹೇಳುತ್ತಿದ್ದೇನೆ ಎಂದರೇ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಚನ್ನಪಟ್ಟಣ.

(ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು.)

ಯಾವುದೇ ದಾಖಲೆಗಳನ್ನು ಗುರುತಿಸಿಕೊಂಡಿರುವುದಿಲ್ಲ.

(ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೋರಿರುವುದರಿಂದ ಮುಂದೂಡಲಾಯಿತು)

(ಈ ಹಂತದಲ್ಲಿ ಪ್ರತಿವಾದಿಯ ವಿರುದ್ಧ ಏಕತರ್ಫಿಯ ಆದೇಶ ಮಾಡಿರುವುದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.)

(ಈ ಹಂತದಲ್ಲಿ ಪ್ರತಿವಾದಿ ಪ್ರತಿವಾದ ಪತ್ರವನ್ನು ಸಲ್ಲಿಸದ ಕಾರಣ ಹಾಗೂ ನ್ಯಾಯಾಲಯದ ಮುಂದೆ ಹಾಜರಾಗದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು. )